1) ಮದ್ಯವನ್ನು ವಿತರಿಸಲು ವಿಶಾಲವಾದ ಪ್ರತ್ಯೇಕವಾದ ಕೊರಡಿ ಇರಬೇಕು

2) ಆರೋಗ್ಯಕರ ವಾತಾವರಣದಲ್ಲಿರುವ ಶೌಚಾಲಯ ವ್ಯವಸ್ಥೆ

3) ಪ್ರತ್ಯೇಕ ಅಡಿಗೆ ಕೋಣೆ ಇರತಕ್ಕದ್ದು

4) ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳಿಗೆ ಸಾಕಷ್ಟು ಸ್ಥಳಾವಕಾಶವಿರಬೇಕು

ಸಿಎಲ್-9 ಬಾರ್ ಸನ್ನದುಗಳು ಷರತ್ತುಗಳು

1) ಕುಳಿತುಕೊಳ್ಳಲು ಸಾಕಷ್ಟು ಸ್ಥಳಾವಕಾಶವಿರಬೇಕು

2) ಸಾಕಷ್ಟು ಸೌಲಭ್ಯಗಳನ್ನು ಹೊಂದಿರತಕ್ಕ ಅಡಿಗೆ ಕೋಣೆ

3) ಮದ್ಯವನ್ನು ವಿತರಿಸಲು (ಡೈನಿಂಗ್ ಹಾಲ್) ಪ್ರತ್ಯೇಕ ಕೊರಡಿ ಸದರಿ ಕೊರಡಿಯು ಕನಿಷ್ಟ 400 ಚ ಅಡಿಗಳು ಇರಬೇಕು

ಆ) ಸಿಎಲ್-4 165

ಸಿಎಲ್-9 3537

ಇ) ಸಿಎಲ್-4 11

ಸಿಎಲ್-9 ಇಲ್ಲ

ಅಬಕಾರಿ ಆದಾಯದಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 145(24)

ಸದಸ್ಯರ ಹೆಸರು ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ)

ಉತ್ತರಿಸುವ ಸಚಿವರು ಶ್ರೀ ಎಂ ಎಂ ನಾಣಯ್ಯ(ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ ಅಬಕಾರಿ ಆದಾಯದಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯವೆಷ್ಟು?

ಆ ಸೆಕೆಂಡ್ಸ್ ಮಾರಾಟ ರಾಜ್ಯದಲ್ಲಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇದನ್ನು ತಡೆಗಟ್ಟಲು ಕೈಗೊಂಡ ಕ್ರಮವೇನು?

ಇ ಸೆಕೆಂಡ್ಸ್ ಮಾರಾಟ ನಿಲ್ಲಿಸುವುದರಿಂದ ಸರ್ಕಾರಕ್ಕೆ ಹೆಚ್ಚಿಗೆ ಆದಾಯ ಬರುವುದೆ?(ವಿವರ ನೀಡುವುದು)

ಉತ್ತರ

ಅ ಅಂದಾಜು ರೂ 2 102 ಕೋಟಿಗಳು

ಆ ಹೌದು

ಅಂತಹ ಪ್ರಕರಣಗಳು ಪತ್ತೆಯಾದಾಗಲೆಲ್ಲಾ ಮೊಕದ್ದಮೆಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ನಲ್ಲಿಸಲಾಗಿದೆ ಇದಲ್ಲದೆ ಇಲಾಖೆಯ ಜಾರಿ ವಿಭಾಗದ ಕಾರ್ಯ ಚಟುವಟಿಕೆಗಳನ್ನು ಬಲಪಡಿಸಲಾಗಿದೆ

ಇ ಈ ವಿಷಯದಲ್ಲಿ ಯಾವುದೇ ಅಂದಾಜು ಮಾಡಿರುವುದಿಲ್ಲ

ಸಂತೇಮರಳ್ಳಿ ವ್ಯಾಪ್ತಿಯ ದೇವನೂರು ಉಪಕೇಂದ್ರದಲ್ಲಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 146(14)

ಸದಸ್ಯರ ಹೆಸರು ಶ್ರೀ ಕೃಷ್ಣಮೂರ್ತಿ ಎ ಆರ್ (ಸಂತೇಮಾರನಹಳ್ಳಿ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್(ಇಂಧನ ಸಚಿವರು)

ಪ್ರಶ್ನೆ

ಅ ಸಂತೇಮರಳ್ಳಿ ಕ್ಷೇತ್ರ ವ್ಯಾಪ್ತಿಯ ದೇವನೂರು ಉಪಕೇಂದ್ರದಲ್ಲಿ ಹೆಚ್ಚುವರಿಯಾಗಿ ಅಳವಡಿಸಲು ಉದ್ದೇಶಿಸಿರುವ 6 3 ಎಂ ವಿ ಎ ಪವರ್ ಟ್ರಾನ್ಸ್ ಫಾರ್ಮರ್‌ನ್ನು ಯಾವಾಗ ಅಳವಡಿಸಲಾಗುವುದು? ಹೆಚ್ಚುವರಿ 10 ಮೆಗಾವ್ಯಾಟ್ ಬೇಡಿಕೆಯಿರುವ ಈ ಉಪಕೇಂದ್ರಕ್ಕೆ 6 3 ಎಂ ವಿ ಎ ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸಿದ್ದಲ್ಲಿ ಈ ಬೇಡಿಕೆಯು ಪೂರ್ಣಗೊಳ್ಳುವುದೇ ಇಲ್ಲದಿದ್ದಲ್ಲ ಈ ಬೇಡಿಕ ಪೂರ್ಣಗೊಳ್ಳಲು